**Spl.C.(Corruption)/03/2016**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ವಿಜಯನಗರ ಜಿಲ್ಲೆ, ಹೊಸಪೇಟೆ.**

**ಸಿ ಡಬ್ಲೂಃ** 5

**ಪಿ ಡಬ್ಲೂಃ** 4

| | |
|---|---|
| ಸಾಕ್ಷಿಯ ಹೆಸರು - | ಬಾಸ್ಕರ್ |
| ತಂದೆಯ ಹೆಸರು - | ಶೇಖರಪ್ಪ |
| ವಯಸ್ಸು - | 39 ವರ್ಷ |
| ಉದ್ಯೋಗ - | ವ್ಯವಸ್ಥಾಪಕ, ಸಂಡೂರು ಪುರಸಭೆ |
| ವಾಸಸ್ಥಳ - | ಕೊಟ್ಟೂರು |

**ಸಾಕ್ಷಿಯನ್ನು ದಿನಾಂಕಃ** 07-03-2026 **ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಪಿ. ಪಿ. ಅವರಿಂದ**

**2015** ರಲ್ಲಿ ನಾನು ಕೊಟ್ಟೂರು ಪಟ್ಟಣ ಪಂಚಾಯತಿಯಲ್ಲಿ ಪ್ರ.ದ.ಸ. ಆಗಿ ಕೆಲಸ ಮಾಡುತ್ತಿದ್ದು, ಆರೋಪಿ ದ್ವಿ.ದ.ಸ., ಆಗಿದ್ದ.

ದಿಃ **06-07-2017** ರಂದು ನಾನು ಕಚೇರಿಗೆ ಹೋಗಿದ್ದೆ. ಅಲ್ಲಿಗೆ ಲೋಕಾಯುಕ್ತ ಪೋಲಿಸರು ಬಂದಿದ್ದರು. ನನ್ನನ್ನು ಕರೆಯಿಸಿ ಆರೋಪಿಯನ್ನು ಲಂಚ ಪಡೆಯುವಾಗ ಹಿಡಿದಿದ್ದಾಗಿ ತಿಳಿಸಿ, ಪಿರ್ಯಾದಿಗೆ ಸಂಬಂಧಿಸಿದ ಕಡತವನ್ನು ನೀಡುವಂತೆ ಕೇಳಿದ ಹಿನ್ನೆಲೆಯಲ್ಲಿ ಅದನ್ನು ನಾನು ಒದಗಿಸಿದ್ದು, ಅದನ್ನು ಮಜರ ನಲ್ಲಿ ಅಮಾನತ್ತುಪಡಿಸಿಕೊಂಡರು. ಸದರಿ ಮಹಜರು ಈಗ ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿಃ **3** ಎಂದು ಗುರುತಿಸಲಾಗಿದೆ. ನಿಪಿಃ **3** **(**ಬಿ**)** ನನ್ನ ಸಹಿ ಆಗಿರುತ್ತದೆ. ನಾನು ಒದಗಿಸಿದ ಕಡತ ಈಗ ನೋಡುತ್ತಿದ್ದು, ಅದನ್ನು ನಿಪಿಃ **14** ಎಂದು **(**ಪುಟ ಸಂಖ್ಯೆಃ **35** ರಿಂದ **135)** ಗುರುತಿಸಲಾಯಿತು.

ಪಿರ್ಯಾದಿಯ ಆಸ್ತಿಯ ಖಾತಾ ಬದಲಾವಣೆಗೆ ಆರೋಪಿ ಲಂಚ ಕೇಳಿದ್ದು, ಪಡೆಯುವಾಗ ಪೋಲಿಸರು ಹಿಡಿದಿದ್ದರು. ಆರೋಪಿಯನ್ನು ಬಂಧಿಸಿದ ಬಗ್ಗೆ ನನಗೆ ಮಾಹಿತಿ ನೀಡಿದ್ದರು. ಅದು ನಿಪಿಃ **15** ಆಗಿರುತ್ತದೆ. ಸಹಿಯನ್ನು ನಿಪಿಃ **15(**ಎ**)** ಎಂದು ಗುರುತಿಸಲಾಯಿತು.

ಇದಾಗಿ 1 ತಿಂಗಳ ನಂತರ ಪೋಲಿಸರು ಠಾಣೆಗೆ ಕರೆಸಿದ್ದು, ಅಲ್ಲಿ ಒಂದು ಧ್ವನಿಯನ್ನು ಕೇಳಿಸಿ ಗುರುತಿಸುವಂತೆ ಹೇಳಿದ ಮೇರೆಗೆ, ನಾನು ಧ್ವನಿ ಕೇಳಿದ್ದು, ಸ್ಪಷ್ಟವಾಗಿ ಗುರುತಿಸಲು ಆಗಲಿಲ್ಲ. ಮತ್ತೆ ಹೇಳುತ್ತೇನೆ, ಅದು ಆರೋಪಿಯ ಧ್ವನಿಯಾಗಿತ್ತು. ಈ ಬಾಬ್ತು ಪೋಲಿಸರು ಮಹಜರು ಜರುಗಿಸಿದ್ದು, ಅದನ್ನು ನಿಪಿಃ 16 ಎಂದು, ಸಹಿಯನ್ನು ನಿಪಿಃ 16(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಆರೋಪಿಯನ್ನು ನೋಡಿ ಗುರುತಿಸಿದ್ದಾನೆ. ರೂ. 2,000/- ಹಣಕ್ಕೆ ಬೇಡಿಕೆ ಇಟ್ಟಿದ್ದ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಪಿ ಎನ್ ಎಂ., ವಕೀಲರಿಂದಃ**

ಆರೋಪಿ ಪರ ವಕೀಲರು ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಸಕಾರಣವಿಲ್ಲದ ಕಾರಣ, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಗಿದೆ.

ಮರು ವಿಚಾರಣೆಃ ಇಲ್ಲಾ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ವಿಜಯನಗರ ಜಿಲ್ಲೆ, ಹೊಸಪೇಟೆ.